## ಇಫ್ಯಾಕ್ಸ್




ಫ್ಯಾಕ್ಸ್ ಎಂದ ಕೂಡಲೇ ಕಣ್ಣಿಗೆ ಕಟ್ಟುವುದು ಫ್ಯಾಕ್ಸ್ ಮಷಿನ್. ಆದರೆ ಆನ್‌ಲೈನ್ ಫ್ಯಾಕ್ಸ್ ಈ ಮಷಿನ್ ಕಿರಿಕಿರಿಯಿಂದ ಮುಕ್ತಿ ನೀಡುತ್ತದೆ. ಈ ಸರಳವಾದ ಐಪ್ಯಾಡ್ ಆ್ಯಪ್ ಫ್ಯಾಕ್ಸ್ ಅನ್ನು ಕಳಿಸಲು ಹಾಗೂ ಪಡೆಯಲು ಅತ್ಯುತ್ತಮವಾದದ್ದು. ಡೆಸ್ಕ್‌ಟಾಪ್‌ನಿಂದ ಮೊಬೈಲ್‌ಗೆ ಕಳಿಸುವಾಗ ಕಳೆಯುವುದೂ ಕಡಿಮೆ. ಉಚಿತವಾದ ಆ್ಯಪ್ ಆಗಿದ್ದು, ಕವರ್ ಲೆಟರ್ ಹಾಗೂ ಡಿಜಿಟಲ್ ಸಹಿಯನ್ನು ಬೆಂಬಲಿಸುತ್ತದೆ. ವೆಬ್ ಪೋರ್ಟಲ್‌ನಿಂದ ಈ ಸೇವೆ ಪಡೆಯಬಹುದು ಅಥವಾ ನಿಮ್ಮ ಇಮೇಲ್‌ನಿಂದಲೇ ಇದನ್ನು ಮಾಡಬಹುದು. ಇದರಲ್ಲಿ ಮೂರು ಬಗೆಯ ಸೇವೆಗಳಿವೆ. ಇಫ್ಯಾಕ್ಸ್ ಪ್ಲಸ್, ಇಫ್ಯಾಕ್ಸ್ ಪ್ರೊ ಹಾಗೂ ಇಫ್ಯಾಕ್ಸ್ ಕಾರ್ಪೊರೇಟ್. ಮೊದಲೆರಡನ್ನು ಸಣ್ಣಪುಟ್ಟ ವ್ಯವಹಾರಗಳಿಗೆ ಹಾಗೂ ವೈಯಕ್ತಿಕವಾಗಿ ಬಳಸಬಹುದು. ಮೂರನೆಯದು 10ಕ್ಕಿಂತ ಅಧಿಕ ಉದ್ಯೋಗಿಗಳಿರುವ ಕಂಪೆನಿಗೆ ಅನುಕೂಲಕರ.

## ಸ್ಟೀಮ್ ಡೈರೆಕ್ಟ್

ಈಗಾಗಲೇ ಗೇಮ್ಸ್ ಸೇವೆಗೆ ಜನಪ್ರಿಯವಾಗಿರುವ ಸ್ಟೀಮ್ ಗ್ರೀನ್‌ಲೈಟ್ ಅನ್ನು ಸ್ಟೀಮ್ ಡೈರೆಕ್ಟ್ ಎಂದು ಬದಲಾಯಿಸಲಾಗಿದೆ. ಗೇಮ್ ಅಭಿವೃದ್ಧಿಪಡಿಸುವವರಿಗೆ ಇದು ವೇದಿಕೆಯಾಗಿದ್ದು, ಅದನ್ನು ಸ್ಟೀಮ್‌ನಲ್ಲಿ ಪ್ರಕಟಿಸಬಹುದು. ಸೈನಪ್ ಆಗಬೇಕಾದರೆ ಕೆಲವು ಡಿಜಿಟಲ್ ಪೇಪರ್‌ವರ್ಕ್‌ಗಳಿದ್ದು, ಕಂಪೆನಿಯಿಂದ ದೃಢೀಕರಿಸಲ್ಪಟ್ಟ ದಾಖಲೆಗಳು ಹಾಗೂ ತೆರಿಗೆ ಪಾವತಿ ಕುರಿತ ದಾಖಲೆಗಳನ್ನು ನೀಡುವುದು ಅಗತ್ಯ. ಈ ಹೊಸ ಸೇವೆಗೆ ಶುಲ್ಕ ನೀಡಬೇಕಾಗುತ್ತದೆ. ಇದು ಸದ್ಯವೇ ಬಿಡುಗಡೆಯಾಗಲಿದೆ.




## ಟಿಎಸ್‌ಸಿ ಮ್ಯೂಸಿಕ್

ಇದೊಂದು ಅದ್ಭುತ ಆ್ಯಪ್ ಆಗಿದ್ದು, ಹಲವು ಬಳಕೆದಾರ ಸ್ನೇಹಿ ಅಂಶಗಳಿಂದ ಕೂಡಿದೆ. ಸಂಗೀತ ಲೋಕದಲ್ಲಿ ನಿಮಗೆ ಇಷ್ಟವಾದ ಹಾಡನ್ನು ಹುಡುಕಾಡುವುದನ್ನು ಬಹಳ ಸುಲಭ ಸಾಧ್ಯವಾಗಿಸಿರುವ ಆ್ಯಪ್ ಇದು. ಐಫೋನ್, ಐಪ್ಯಾಡ್ ಹಾಗೂ ಐಪಾಡ್ ಬಳಕೆದಾರರು ಇಷ್ಟಪಡುವ ಆ್ಯಪ್ ಆಗಿದ್ದು, ಶ್ರೋತೃಗಳು ಗುಣಮಟ್ಟದ ಸಂಗೀತದ ಅನುಭವ ಪಡೆಯಬಹುದು. ಪ್ರತಿ ಬಾರಿ ನಿಮ್ಮ ನೆಚ್ಚಿನ ಹಾಡನ್ನು ಕಾಪಿಡುವ ಅಗತ್ಯವಿಲ್ಲ. ಈ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿ ಸ್ಪೋರ್ಟಿಫೈ, ಯೂಟ್ಯೂಬ್, ಸೌಂಡ್‌ಕ್ಲೌಡ್ ಕೊತೆ ಸಮೀಕರಿಸಿ ಅದ್ಭುತವಾದ ಸಂಗೀತದ ಅನುಭವ ಪಡೆಯಬಹುದು. ಗ್ರಾಫ್ ಮೂಲಕ ತಮ್ಮ ಶ್ರವಣ ಸಾಮರ್ಥ್ಯವನ್ನು ಅಳೆಯಬಹುದು. ಅಂದರೆ ಕಿವಿಗೆ ತೊಂದರೆಯಾಗುವುದರಿಂದ ತಪ್ಪಿಸಿಕೊಳ್ಳಬಹುದು.




## ವ್ಯಾಪಾರ್




ವಹಿವಾಟಿಗೆ ಹೇಳಿ ಮಾಡಿಸಿದಂತಹ ವೈವಿಧ್ಯಮಯ ಹಾಗೂ ನಂಬಿಗೆಗೆ ಅರ್ಹವಾದ ಆ್ಯಪ್. ಅಪರೂಪವಾದ ವಿನ್ಯಾಸವಿದ್ದು, ಕ್ಷಿಪ್ರವಾಗಿ ಬ್ಯಾಲನ್ಸ್ ಶೀಟ್ ವರದಿಯನ್ನು ಪಡೆಯಬಹುದು. ಭದ್ರತೆಯ ವಿಷಯದಲ್ಲೂ ಯಾವುದೇ ರಾಜಿ ಮಾಡಿಕೊಂಡಿಲ್ಲ. ತಮ್ಮ ವಹಿವಾಟನ್ನು ತಾವೇ ನಿಭಾಯಿಸುವ ವ್ಯಾಪಾರಿಗಳಿಗೆ ಹಾಗೂ ವ್ಯಕ್ತಿಗಳಿಗೆ ಹೇಳಿ ಮಾಡಿಸಿದಂತಹ ಆ್ಯಪ್. ಗೂಗ್ಲ್ ಪ್ಲೇ ಸ್ಟೋರ್‌ನಿಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಅತ್ಯಂತ ಕಡಿಮೆ ಖರ್ಚಿನಲ್ಲಿ ತಮ್ಮ ವಹಿವಾಟನ್ನು ನಿರ್ವಹಿಸಬಹುದು. ವಿವಿಧ ವರದಿಗಳನ್ನು ಶೇರ್ ಮಾಡಬಹುದು ಹಾಗೂ ಬೇರೆ ಕಡೆ ಕಳಿಸಬಹುದು.

■ ಎಸ್. ತುಂಬೆ